Caste Certificate ಬಗ್ಗೆ judgement ಕೊಟ್ಟಿದ್ದಾರೆ, ಅದಕ್ಕೆ ಯಾವುದೇ jurisdiction ಇಲ್ಲ. ಅದನ್ನೂ ನಾವು observation ಮಾಡಿದ್ದೇವೆ. ಆದರೂ ಅದನ್ನು ಮತ್ತೊಂದು ಸಾರಿ ಪರಿಶೀಲನೆ ಮಾಡುತ್ತೇನೆ. ಆದರೆ ನನಗೆ ಬಂದಿರುವ ವರದಿಗಳ ಪ್ರಕಾರ ಅದು Gazeteer ಪ್ರಕಾರ ಇರಬಹುದು ಅಥವಾ Supreme Court citation ಪ್ರಕಾರ ಇರಬಹುದು, ಈ ಭಾಗದಲ್ಲಿ ಬುಡುಗ ಜಂಗಮ ಸಮಾಜದವರು ಇಲ್ಲ. ಒಂದು ಆತಂಕದ ವಿಚಾರವಿದೆ. ಅನೇಕ ಕಡೆ fake caste certificate ಬಗ್ಗೆ ನಾನು ಹೇಳಿದ್ದೆ. 1971ರಲ್ಲಿ ಕೇವಲ ಮೂರು ಸಾವಿರಗಳಷ್ಟಿದ್ದ ಕುಟುಂಬಗಳು ಇವತ್ತು ಸುಳ್ಳು ಜಾತಿ ಪ್ರಮಾಣ ಪತ್ರಗಳಿಂದಾಗಿ ಐವತ್ತು ಸಾವಿರಕ್ಕೆ ಹೋಗಿವೆ. ಇದು ಆತಂಕದ ವಿಚಾರವಾಗಿದೆ. ನಾನು ತನಿಖೆ ಮಾಡಿಸುತ್ತಿದ್ದೇನೆ. ತನಿಖಾ ವರದಿ ಬಂದ ಮೇಲೆ ಅದರ ಮೇಲೆ ಕ್ರಮ ಜರುಗಿಸುತ್ತೇನೆ. ಇದನ್ನು ನಾನು ಮತ್ತೊಂದು ಸಾರಿ ಪರಿಶೀಲನೆ ಮಾಡುತ್ತೇನೆ. ಒಟ್ಟಾರೆಯಾಗಿ ಕೋಲಾರ ಮತ್ತು ಈ ಭಾಗದಲ್ಲಿ ಬುಡುಗ ಜಂಗಮ ಸಮಾಜದವರು ಇಲ್ಲ ಎಂದು ನಾನು ಪ್ರತಿಪಾದಿಸುತ್ತೇನೆ.

ಡಾ. ಹೆಚ್. ಸಿ. ಮಹದೇವಪ್ಪ: ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಎಸ್.ಸಿ./ಎಸ್.ಟಿ. ಜನಾಂಗದವರಿಗೆ ಸಂವಿಧಾನಬದ್ಧವಾಗಿ ಕೊಟ್ಟಿರುವ ಸವಲತ್ತುಗಳನ್ನು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪಡೆದು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಮಾನ್ಯ ಸಚಿವರೇ ಹೇಳಿದ್ದಾರೆ. ಅವರ ಮೇಲೆ ಕ್ರಮ ತೆಗೆಕೊಳ್ಳಬೇಕು ಮತ್ತು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಕೊಟ್ಟ ಅಧಿಕಾರಿಗಳ ವಿರುದ್ಧವೂ ಸೂಕ್ತ ಕ್ರಮ ತೆಗೆದೊಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಆಯಿತು.

10. ವಿಷಯ: ಮುಚ್ಚುತ್ತಿರುವ ನೆಮ್ಮದಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ Computer Operator ಗಳನ್ನು ಸರ್ಕಾರಿ ಹುದ್ದೆಗೆ ನೇಮಕ ಮಾಡಿಕೊಳ್ಳುವ ಬಗ್ಗೆ

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನೆಮ್ಮದಿ ಕೇಂದ್ರಗಳೆಂದು ಹೇಳಿ ಸರ್ಕಾರದವರು ರಾಜ್ಯದ್ಯಂತ ಸುಮಾರು 801 ನೆಮ್ಮದಿ ಕೇಂದ್ರಗಳನ್ನು ತೆರೆದಿದ್ದರು. ಅವುಗಳಲ್ಲಿ ಸುಮಾರು 1,600 ಜನ computer operator ಗಳಿದ್ದರು. ಈಗ ನೆಮ್ಮದಿ

ಕೇಂದ್ರಗಳನ್ನು ಮುಚ್ಚಿದರೆ ಈ 1,600 ಜನ computer operator ಗಳು ಬೀದಿ ಪಾಲಾಗುತ್ತಾರೆ. ನೀವು ನೆಮ್ಮದಿ ಕೇಂದ್ರಗಳನ್ನು ಮುಂದುವರೆಸಬೇಕು. ಎನ್ನುವ ಒತ್ತಾಯಕ್ಕಿಂತ ಹೆಚ್ಚಾಗಿ ಅಲ್ಲಿ ಕೆಲಸ ಮಾಡುತ್ತಿರುವ 1,600 ಜನರ ಭವಿಷ್ಯವೇನು ಏನ್ನುವ ಬಗ್ಗೆ ಯೋಚನೆ ಮಾಡಬೇಕು. ಉದ್ಯೋಗ ಇಲ್ಲದೇ ಇವರು ಬೀದಿ ಪಾಲಾಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ, ಇವರನ್ನು ಸರ್ಕಾರದಲ್ಲಿ recruitment ಮಾಡಿಕೊಳ್ಳುವಂಥ ಕೆಲಸ ಮಾಡಬೇಕು. ಮುಖ್ಯಂತ್ರಿಗಳು ಇಲ್ಲೇ ಇದ್ದಾರೆ. ಸಭಾನಾಯಕರಾದ ಮುಖ್ಯಮಂತ್ರಿಗಳು ಇದ್ದಾಗ, ಬೇರೆ ಮಂತ್ರಿಗಳ ಉತ್ತರವನ್ನೂ ಅವರೇ ಕೊಡಬಹುದು. ಮಂತ್ರಿಗಳೇ ಕೊಡಬೇಕು ಎಂದೇನೂ ಇಲ್ಲ, You are the head of the Government, head of the Council of Ministers. ಹಾಗಾಗಿ ನೀವೇ ಉತ್ತರ ಹೇಳಬಹುದು. ಈ 1,600 ಜನರ ಭವಿಷ್ಯವನ್ನು ಸರಿಮಾಡುವಂಥ ಕೆಲಸವನ್ನು ಸರ್ಕಾರ ಮಾಡಬೇಕಲ್ಲವೇ? otherwise, they are thrown into the streets. ಅವರಿಗೆ ಹೆಂಡತಿ, ಮಕ್ಕಳೆಲ್ಲರೂ ಇದ್ದಾರೆ. ನೆಮ್ಮದಿ ಕೇಂದ್ರಗಳನ್ನು ಮಾಡಿ ಪಾರ್ಲಿಮೆಂಟ್ ಚುನಾವಣೆ ಸಮಯದಲ್ಲಿ ಟಿಂಪೊರರಿ ಬಿ.ಪಿ.ಎಲ್. ಕಾರ್ಡ್‌ಗಳನ್ನು ಇವರ ಮೂಲಕ ಕೊಟ್ಟು 28 ಲಕ್ಷ ಓಟುಗಳನ್ನು ತೆಗೆದು ಹಾಕಿಬಿಟ್ಟದ್ದರು. ಅದು ಬೇರೆ ವಿಚಾರ. ಆದರೆ ಈ 1,600 ಜನರಿಗೆ ಸಹಾಯ ಮಾಡುವಂಥ ಕೆಲಸವನ್ನು ಮಾಡಬೇಕು. Recruitment ಮಾಡುವಾಗ reservation policy ಯನ್ನು follow ಮಾಡಿ. Always that follows. ಯಾವಾಗಲೂ recruitment ಮಾಡುವಾಗ reservation ಅನ್ನು follow ಮಾಡಿಯೇ ಮಾಡಬೇಕು. ಅದನ್ನು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಮುಖ್ಯಮಂತ್ರಿಗಳೇ ಈಗ ಇಲ್ಲೆ ಇದ್ದಾರೆ. ಸ್ವಲ್ಪ ಸಹಾನುಭೂತಿಯ ದೃಷ್ಟಿಯಿಂದ, ಮಾನವೀಯತೆಯ ದೃಷ್ಟಿಯಿಂದ ಇದನ್ನು ನೋಡುವುದು ಬಹಳ ಒಳ್ಳೆಯದು ಎನ್ನುವುದು ನನ್ನ ಸಲಹೆ. ದಯಮಾಡಿ ಇದನ್ನು ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಸಚಿವರು): ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರಾದಂಥ ಶ್ರೀಯುತ ಸಿದ್ದರಾಮಯ್ಯನವರು ರಾಜ್ಯದಲ್ಲಿ 801 ನೆಮ್ಮದಿ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ 1,600 Computer Operator ಗಳ ಸೇವೆಯನ್ನು ಸರ್ಕಾರದಲ್ಲಿ ವಿಲೀನಗೊಳಿಸುವ ವಿಷಯದಲ್ಲಿ. ಮಾನವೀಯತೆಯ ಕಾರಣಕ್ಕಾಗಿ ಅವರಿಗೆ ಅವಕಾಶವನ್ನು ಕಲ್ಪಿಸಿ ಕೊಡಬೇಕು ಎನ್ನುವ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಈ ವಿಷಯದ ಕುರಿತಂತೆ, ಇವರನ್ನು ಎಲ್ಲಿ

ಹೊಂದಾಣಿಕೆ ಮಾಡಬಹುದು ಎನ್ನುವ ಬಗ್ಗೆ ಕಂದಾಯ ಸಚಿವರಿಂದ ವಿವರವಾದ ಉತ್ತರವನ್ನು ದೊರಕಿಸಿ ಕೊಡುತ್ತೇವೆ.

11. ವಿಷಯ: ನನ್ನ ಮನೆ ನನ್ನ ಸ್ವತ್ತು

ಶ್ರೀ ಸಿದ್ದರಾಮಯ್ಯ : (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನನ್ನ ಮನೆ ನನ್ನ ಸ್ವತ್ತು ಎಂದು ಹೇಳಿ ಬಜೆಟ್‌ನಲ್ಲಿ announce ಮಾಡಿದರು. ನನ್ನ ಮನೆ ಅಂದಮೇಲೆ ಅದು ನನ್ನ ಸ್ವತ್ತೇ. ಹಕ್ಕುಪತ್ರವಿಲ್ಲದಿದ್ದಾಗ ಅದು ನನ್ನ ಸ್ವತ್ತಾಗುವುದಿಲ್ಲ. ಆಶ್ರಯ, ಅಂಬೇಡ್ಕರ್, ಜನತಾ ಮನೆಗಳು ಸೇರಿದಂತೆ ಇಲ್ಲಿ ಸಾಲದ component ಇರುತ್ತದೆ. ಆ ಹಣ ಕಟ್ಟಲು ಅವಧಿಯನ್ನು ದಿ: 31-03-2013ರವರೆಗೆ ವಿಸ್ತರಿಸಿದ್ದಾರೆ. That ends on 31st March, 2013. ಅಲ್ಲಿಯವರೆಗೆ ವಿಸ್ತರಿಸಲಾಗಿದೆ. ಎನ್ನುವ ಒಂದು ಆದೇಶವನ್ನು ಹೊರಡಿಸಿದ್ದಾರೆ. ಬೆಳಗಾಂ ಜಿಲ್ಲೆಯ ಅಥಣಿ ಪುರಸಭಾ ಕಾರ್ಯಾಲಯದಲ್ಲಿರತಕ್ಕಂಥ ಮುಖ್ಯಾಧಿಕಾರಿ ದಿ: 30-06-2012 ರಂದು ಪತ್ರವನ್ನು ಬರೆದು ಕಳುಹಿಸಿದ್ದಾರೆ. ಏನೆಂದರೆ, 21 ದಿವಸ ಗಡುವು ಕೊಟ್ಟು ನೀವು ಅಷ್ಟರಲ್ಲಿ ಈ ಸಾಲವನ್ನು ಕಟ್ಟದಿದ್ದರೆ ನಿಮ್ಮನೆಲ್ಲ ಒಕ್ಕಲೆಬ್ಬಿಸುತ್ತೇವೆ, ಮನೆಯನ್ನು ಖಾಲಿ ಮಾಡಿಸುತ್ತೇವೆಂದು ಹೇಳಿದ್ದಾರೆ. ಸಾಲ ವಸೂಲಿ ಮಾಡುವುದಕ್ಕೆ ಹೊರಟ್ಟಿದ್ದಾರೆ. ಆದರೆ, ಈಗ ಬರಗಾಲ ಬೇರೆ ಇದೆ. ಇಂಥ ಸನ್ನಿವೇಶದಲ್ಲಿ ಈ ರೀತಿ ಹೇಳಿದ್ದಾರೆ. ಅದೂ ಕೂಡ ಇವರು ವಸೂಲಿ ಮಾಡುವುದಕ್ಕೆ ಹೋಗುತ್ತಿಲ್ಲ. ವಸೂಲಿ ಮಾಡುವುದಕ್ಕೆ ಬೇರೆ ಯಾರಿಗೋ ಅಧಿಕಾರ ಕೊಟ್ಟಿದ್ದಾರೆ. ವಸೂಲಿ ಮಾಡುವುದನ್ನು Total Solutions ಎನ್ನುವಂಥ ಒಂದು NGO ಸಂಸ್ಥೆಗೆ ವಹಿಸಿಕೊಟ್ಟಿದ್ದಾರೆ. ಆ ಸಂಸ್ಥೆಯವರು ದಬ್ಬಾಳಿಕೆ, ಗೂಂಡಾಗಿರಿ ಎಲ್ಲಾ ಮಾಡುತ್ತಿದ್ದಾರೆ. ಅದರ ಬಗ್ಗೆ ಅಥಣಿಯಲ್ಲಿ ಮನೆ ಕಳೆದುಕೊಳ್ಳುವ ಸಾರ್ವಜನಿಕರು ದೊಡ್ಡ ಪ್ರತಿಭಟನೆ ಮಾಡಿದ್ದಾರೆ. ಈ ರೀತಿಯಾಗಿ ಬಲಾತ್ಕಾರವಾಗಿ ಒಕ್ಕಲೆಬ್ಬಿಸುವುದು ಸರಿಯಾದ ಕ್ರಮವಲ್ಲ. ನಾವು ಇಲ್ಲಿ ಒಂದು ಸಾರಿ ಚರ್ಚೆ ಮಾಡಿ ಒತ್ತಾಯ ಮಾಡಿದ್ದೆವು. ತೆಗದುಕೊಂಡಿರುವ ಸಾಲವೇನಿದೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು, ಬಡವರು, ಹಿಂದುಳಿದ ವರ್ಗದವರು ಏನು ಸಾಲ ತೆಗದುಕೊಂಡಿದ್ದಾರೆ, ಅವರ ಸಾಲವನ್ನು ಮನ್ನಾ ಮಾಡಬೇಕೆಂದು ಒತ್ತಾಯ ಮಾಡಿದ್ದೆವು. ಸೋಮಣ್ಣನವರು ಈಗ ಸದನದಲ್ಲಿಲ್ಲ. ಅವರು ಇಲ್ಲಿ ಕಳೆದ ಸಾರಿ ಅವರ ಸಾಲವನ್ನೆಲ್ಲ ಮನ್ನಾ ಮಾಡುತ್ತೇವೆಂದು ಒಂದು ಸಾರಿ ಹೇಳಿದ್ದರು. ಖಾಸಗಿಯವರಿಗೆ ವಹಿಸಿದ್ದು, ಅವರು ಬಲಾತ್ಕಾರವಾಗಿ ವಸೂಲಿ ಮಾಡಲು